Date : 28-9-2015

# ಭಾರತದಲ್ಲಿ ಗೋಡಂಬಿ ತಿರುಳು ಬಳಕೆ

ಗೋಡಂಬಿ ತಿರುಳು ಬಳಕೆಯಲ್ಲಿ ಭಾರತ ಯು.ಎಸ್.ನ್ನು ಹಿಂದಿಕ್ಕಿದೆ. ಹಿಂದೆ ಯು.ಎಸ್. ಗೋಡಂಬಿ ತಿರುಳು ಬಳಕೆಯಲ್ಲಿ ಪ್ರಪಂಚದ ಪ್ರಥಮ ಸ್ಥಾನದಲ್ಲಿತ್ತು. ಈ ಭಾರತ ಆ ಸ್ಥಾನದಲ್ಲಿದೆ ಎಂದು ಭಾರತದ ಕಾಶ್ಯೂ ಎಕ್ಸ್‌ಪೋರ್ಟ್ ಪ್ರೊಮೋಶನ್ ಕೌನ್ಸಿಲ್‌ನ ಬಜೆಟ್ ಮತ್ತು ಆರ್ಥಿಕ ಕಮಿಟಿಯ ಕನ್ವೇನರ್ ಆರ್. ಕೆ. ಬೂದೇಶ್ ಹೇಳಿದ್ದಾರೆನ್ನಲಾಗಿದೆ. ಅವರ ಪ್ರಕಾರ ಭಾರತದ ಗೋಡಂಬಿಯಿಂದ ಉತ್ಪಾದಿತವಾದ ಗೋಡಂಬಿ ತಿರುಳು ಮತ್ತು ಆಮದಿತ ಕಚ್ಚಾ ಗೇರು ಬೀಜದಿಂದ ಉತ್ಪಾದಿಸಲಾದ ಗೋಡಂಬಿ ತಿರುಳಿನ ಅರ್ಧ ಭಾಗ ಭಾರತದಲ್ಲೇ ಬಳಕೆಯಾಗುತ್ತಿದೆ. ಭಾರತ ಗೋಡಂಬಿ ತಿರುಳು ಬಳಕೆ ಆರ್ಥಿಕ ಉದಾರೀಕರಣದ ನಂತರ ವಾರ್ಷಿಕ 8.6 ಶೇಕಡಾ ದರದಲ್ಲಿ ವೃದ್ಧಿಯಾಗುತ್ತಿವೆ.

ಮುಂದುವರಿದು ಅವರು ಭಾರತ ಜಾಗತಿಕ ನಂಬರ್ ವನ್ ಉತ್ಪಾದಕ ತಯಾರಕ ಮತ್ತು ಬಳಕೆದಾರ ದೇಶವಾಗಿದೆ. ವಿಯೆಟ್ನಾಂ ಜಾಗತಿಕ ಅತೀ ಹೆಚ್ಚು ಗೋಡಂಬಿ ತಿರುಳು ರಫ್ತುದಾರ ದೇಶವಾಗಿದೆ. ಭಾರತದ ಕಚ್ಚಾ ಗೋಡಂಬಿ ಉತ್ಪಾದನೆ ವಾರ್ಷಿಕ ಸುಮಾರು 8.5 ಲಕ್ಷ ಟನ್‌ಗಳಾಗಿದ್ದು, ಸರಿಸುಮಾರು ಅದೇ ಪ್ರಮಾಣದಲ್ಲಿ ಆಮದು ಮಾಡುತ್ತಿದೆ. ಸುಮಾರು 17 ಲಕ್ಷ ಟನ್‌ಗಳ ಕಚ್ಚಾ ಗೋಡಂಬಿಯಿಂದ ಗೋಡಂಬಿ ತಿರುಳು ಉತ್ಪಾದಿಸುದಾಗಿ 23 ಶೇಕಡಾ ಗೋಡಂಬಿ ತಿರುಳು ಉತ್ಪಾದಿತವಾಗುತ್ತಿದ್ದು, ಸುಮಾರು 1.25 ಲಕ್ಷ ಟನ್‌ಗಳು ರಫ್ತಾಗುತ್ತಿವೆ. ಉಳಿದ ಗೋಡಂಬಿ ತಿರುಳು ದೇಶದಲ್ಲಿ ಬಳಕೆಯಾಗುತ್ತಿದೆ ಎಂದು ಹೇಳಿದ್ದಾರೆ. ಭಾರತದಲ್ಲಿ ಪ್ರಮುಖವಾಗಿ ಉತ್ತರ ಭಾರತದ ದೆಹಲಿ, ಮುಂಬಯಿ, ಜೈಪುರ ಮತ್ತು ಲಕ್ನೋಗಳು ಪ್ರಮುಖ ಬಳಕೆದಾರ ಕೇಂದ್ರಗಳೆನ್ನಲಾಗಿದೆ. ಸಿ.ಇ.ಪಿ.ಸಿ.ಐ. ಯ ಗೋಲ್ಡನ್ ಜುಬಿಲಿ ಮೀಟ್ ಈ ವಾರದ ಅಂತ್ಯದಲ್ಲಿ ನಡೆಯಲಿದೆಯೆನ್ನಲಾಗಿದೆ.

quickmarketreports.com